ಕಂಡು ಬಂದಲ್ಲಿ ರಾಜ್ಯದ ಸಚಿವ ಸಂಪುಟದ ಅನುಮೋದನೆಯೊಂದಿಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾಗುತ್ತದೆ.

ಕುಣಬಿ ಜನಾಂಗದವರ ಕುಲಶಾಸ್ತ್ರೀಯ ಅಧ್ಯಯನ ಕೈಗೊಳ್ಳುವುದರ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಗೋವಾ ರಾಜ್ಯದಲ್ಲಿ ಈ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಈ ಮೇಲೆ (ಅ) ಮತ್ತು (ಇ)ನಲ್ಲಿ ವಿವರಿಸಲಾಗಿದೆ.

(ಸಕಇ 27 ಎಸ್‌ಎಡಿ 2009)

(ಡಿ.ಸುಧಾಕರ್)
ಸಮಾಜ ಕಲ್ಯಾಣ ಸಚಿವರು.

ವಿಧಾನ ಸಭೆ

116 ಶ್ರೀ.ಅಮರೇಶ್
ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಕೊರೆಯುವುದು.
ಸಮಾಜ ಕಲ್ಯಾಣ ಸಚಿವರು

ಅ) ಮುಳಬಾಗಿಲು ತಾಲ್ಲೂಕಿಗೆ 2007–08 ಹಾಗೂ 2008–09ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಲ್ಲಿ ಮಂಜೂರಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು);

ಗಂಗಾ ಕಲ್ಯಾಣ ಯೋಜನೆಯಡಿ ಮುಳಬಾಗಿಲು ತಾಲ್ಲೂಕಿಗೆ ಮಂಜೂರಾದ ಕೊಳವೆ ಬಾವಿಗಳ ವಿವರ:–

ಕ್ರ ಸಂ	ನಿಗಮದ ಹೆಸರು	ಮಂಜೂರಾದ ಕೊಳವೆ ಬಾವಿಗಳ ಸಂಖ್ಯೆ	
		2007–08	2008–09
1	ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ	56	65
2	ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ	20	12
3	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ	14	12

	ಅಭಿವೃದ್ಧಿ ನಿಗಮ	

ಆ) ಮಂಜೂರಾಗಿರುವ ಕೊಳವೆ ಬಾವಿಗಳಲ್ಲಿ ಎಷ್ಟು ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರಿಯಿಸಿ ಕೊಡಲಾಗಿದೆ (ಜಾತಿವಾರು ವಿವರ ನೀಡುವುದು); ಹಾಗೂ ಬಾಕಿ ಉಳಿದಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು;

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ 2007–08ನೇ ಸಾಲಿಗೆ ಮಂಜೂರಾದ 56 ಕೊಳವೆ ಬಾವಿಗಳ ಪೈಕಿ 06 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಇವುಗಳಲ್ಲಿ ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಉಪಜಾತಿಯವರಿಗೆ 03 ಮತ್ತು ಭೋವಿ ಜನಾಂಗದವರಿಗೆ 03 ಕೊಳವೆಬಾವಿಗಳನ್ನು ನೀಡಲಾಗಿದೆ. ಬಾಕಿ ಕೊಳವೆ ಬಾವಿಗಳ ಸಂಖ್ಯೆ 50 ಆಗಿರುತ್ತದೆ. ಅದೇ ರೀತಿ ಉಲ್ಲೇಖಿತ ನಿಗಮದ ವತಿಯಿಂದ 2008–09ನೇ ಸಾಲಿಗೆ 65 ಕೊಳವೆಬಾವಿಗಳನ್ನು ಕೊರೆಯಿಸಲು ಕಾರ್ಯದೇಶ ನೀಡಲಾಗಿದ್ದು ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಯಾವುದೇ ಕೊಳವೆಬಾವಿಗಳನ್ನು ಕೊರೆಯಿಸಲಾಗಲಿಲ್ಲ. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ 2007–08ನೇ ಸಾಲಿಗೆ ಮಂಜೂರಾದ 10 ವೈಯಕ್ತಿಕ ಕೊಳವೆ ಬಾವಿಗಳ ಪೈಕಿ 05 ಕೊಳವೆ ಬಾವಿಗಳನ್ನು ಕೊರೆದಿದ್ದು, ಇನ್ನೂ 05 ಕೊಳವೆ ಬಾವಿಗಳು ಬಾಕಿ ಉಳಿದಿರುತ್ತವೆ. ಅದೇ ರೀತಿ 2008–09ನೇ ಸಾಲಿಗೆ ಮಂಜೂರಾದ 02 ಸಾಮೂಹಿಕ ಘಟಕಗಳ ಪೈಕಿ 01 ಘಟಕದಲ್ಲಿ 02 ಕೊಳವೆ ಬಾವಿಗಳನ್ನು ಕೊರೆದಿದ್ದು, ಬಾಕಿ ಇರುವ 01 ಘಟಕದಲ್ಲಿ 02 ಕೊಳವೆ ಬಾವಿಗಳನ್ನು ಕೊರೆಯಲು ಬಾಕಿ ಇರುತ್ತದೆ. ಈಗಾಗಲೇ ಕೊರೆದಿರುವ ಕೊಳವೆ ಬಾವಿಗಳ ಫಲಾನುಭವಿಗಳ ಜಾತಿವಾರು ವಿವರ ಈ ಕೆಳಕಂಡಂತಿದೆ.

<u>ವೈಯಕ್ತಿಕ ಕೊಳವೆ ಬಾವಿಗಳು:</u> ಗೊಲ್ಲ–01, ಕುರುಬ–02, ವಿಶ್ವಕರ್ಮ–01, ಭಜಂತ್ರಿ–01.

<u>ಸಾಮೂಹಿಕ ಕೊಳವೆ ಬಾವಿಗಳು:</u> ಒಕ್ಕಲಿಗ–02 (ಘಟಕದ ಫಲಾನುಭವಿಗಳ ಸಂಖ್ಯೆ–03)

ಇ) ರಾಜ್ಯದಲ್ಲಿ 2008–09ನೇ ಸಾಲಿನಲ್ಲಿ ಹೆಚ್ಚುವರಿ ಕೊಳವೆ ಬಾವಿಗಳನ್ನು ಕೊರೆಯಲು ಕ್ರಮಕೈಗೊಳ್ಳಲಾಗಿದೆಯೇ (ತಾಲ್ಲೂಕುವಾರು ವಿವರ ನೀಡುವುದು)

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಯಾವುದೇ ಹೆಚ್ಚುವರಿ ಕೊಳವೆಬಾವಿಗಳನ್ನು ಕೊರೆಯಲು ಕ್ರಮ ಕೈಗೊಂಡಿರುವುದಿಲ್ಲ.

ಆದರೆ ಇತರೆ ನಿಗಮಗಳ ವತಿಯಿಂದ 2008–09ನೇ ಸಾಲಿನಲ್ಲಿ ಹೆಚ್ಚುವರಿ ಕೊಳವೆ ಬಾವಿಗಳನ್ನು ಕೊರೆಯಲು ಕ್ರಮ ಕೈಗೊಂಡಿರುವುದರ ವಿವರ ಈ ಕೆಳಗಿನಂತಿದೆ:

ಕ್ರ ಸಂ	ನಿಗಮದ ಹೆಸರು	ವಿಧಾನ ಸಭಾ ಕ್ಷೇತ್ರದ ಹೆಸರು			
		ಶಿಕಾರಿ	ಹಿರಿ	ಚಿತ್ತಾ	ವರು

		ಪುರ	ಯೂರು	ಪುರ	ಣಾ
1	ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ	50	60	–	–
2	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	120	121	25	18

(ಸಕಇ 36 ಎಸ್‌ಡಿಸಿ 2009)

(ಡಿ.ಸುಧಾಕರ್)
ಸಮಾಜ ಕಲ್ಯಾಣ ಸಚಿವರು

<u>ಕರ್ನಾಟಕ ವಿಧಾನ ಸಭೆ.</u>

129 ಶ್ರೀ.ಪ್ರತಾಪ್‌ಗೌಡ ಪಾಟೀಲ್(ಮಸ್ಕಿ)
ಶ್ರೀ.ಡಿ.ಸುಧಾಕರ, ಮಾನ್ಯ ಸಮಾಜ ಕಲ್ಯಾಣ ಸಚಿವರು

ಅ) ಪರಿಶಿಷ್ಟ ಜಾತಿಯ ಸ್ತ್ರೀ ಶಕ್ತಿ ಸಂಘಗಳಿಗೆ ಕೊಡುವಂತಹ 10,000–00 ರೂ.ಗಳ ಸಹಾಯಧನವನ್ನು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಸ್ತ್ರೀ ಶಕ್ತಿ ಸಂಘಗಳಿಗೂ ಕೊಡುವ ವಿಚಾರ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಎಂದಿನಿಂದ ನೀಡಲಾಗುವುದು?

<u>ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ</u>

ಪರಿಶಿಷ್ಟ ಜಾತಿಯ ಸ್ತ್ರೀ ಶಕ್ತಿ ಸಂಘಗಳಿಗೆ ಕೊಡುವಂತಹ 10,000/– ರೂ.ಗಳ ಸಹಾಯಧನವನ್ನು ಹಿಂದುಳಿದ ವರ್ಗಗಳ ಸ್ತ್ರೀ ಶಕ್ತಿ ಸಂಘಗಳಿಗೆ ಕೊಡುವ ವಿಚಾರವಿರುವುದಿಲ್ಲ.

ರಾಜ್ಯದಲ್ಲಿ ಹಿಂದುಳಿದ ವರ್ಗೆಗಳ ಮಹಿಳೆಯರು ರಚಿಸಿಕೊಂಡಿರುವ ಸ್ತ್ರೀ ಶಕ್ತಿ ಸಂಘಗಳಿಗೆ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ನವದೆಹಲಿ ಇವರ ಆರ್ಥಿಕ ನೆರವಿನೊಂದಿಗೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ನ್ಯೂ ಸ್ವರ್ಣಿಮಾ ಯೋಜನೆಯಲ್ಲಿ ಸ್ತ್ರೀ ಶಕ್ತಿ ಗುಂಪುಗಳಲ್ಲಿನ ಹಿಂದುಳಿದ ವರ್ಗಗಳ ಮಹಿಳೆಯರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಶೇ.4ರ ಬಡ್ಡಿದರದಲ್ಲಿ ಒಂದು ಸ್ತ್ರೀ ಶಕ್ತಿ ಸಂಘಕ್ಕೆ ರೂ.1.00ಲಕ್ಷದಿಂದ ರೂ.1.50ಲಕ್ಷಗಳವರೆಗೆ ಸಾಲವನ್ನು ಕೊಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

<u>ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ:</u>